# ಜಟಾಧಾರಿ ವೃಕ್ಷಗಳು

ನಮಗೆ ತಿಳಿದಿರುವಂತೆ ಬ್ರಹ್ಮಾಂಡದಲ್ಲಿ ಜೀವೋತ್ಪತ್ತಿ ಆಗಿರುವ ಏಕೈಕ ತಾಣ ನಮ್ಮ ಈ ಅನನ್ಯ ಭೂಮಿ. ಇಲ್ಲಿ ಬದುಕಲು ಅಸಾಧ್ಯವಾದ ಅತ್ಯಂತ ದುರ್ಗಮ ಪ್ರದೇಶಗಳಾದ ಮರುಭೂಮಿ, ಹಿಮಖಂಡ, ಬೆಳಕೇ ಬೀಳದ ಸಾಗರ ತಟ, ಅಷ್ಟೇ ಏಕೆ, ಜ್ವಾಲಾಮುಖಿಯ ಕುದಿಯುವ ಲಾವಾರಸದಲ್ಲೂ ಜೀವಿಗಳಿರುವುದು ಹಾಗೂ ಆಯಾ ಪರಿಸರಕ್ಕೆ ತಕ್ಕಂತೆ ಸೂಕ್ತ ದೈಹಿಕ ರಚನೆ ಹೊಂದಿರುವುದು ವಿಸ್ಮಯ ಮೂಡಿಸುವ ಸಂಗತಿಗಳೇ. ಹೀಗೆ ಸೂಕ್ತ ದೈಹಿಕ ರಚನೆ ಹೊಂದುವುದು ಕೇವಲ ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳಿಗೆ ಸೀಮಿತವಾಗಿಲ್ಲ. ವೃಕ್ಷಗಳಲ್ಲಿಯೂ ಇಂತಹ ಬದಲಾವಣೆಗಳು ಆಗುತ್ತವೆ. ಅವುಗಳ ದೇಹ ರಚನೆಯೂ ವಾತಾವರಣಕ್ಕೆ ತಕ್ಕಂತೆ ಇರುತ್ತವೆ. ಇದಕ್ಕೆ ಉತ್ತಮ ಉದಾಹರಣೆ, ನ್ಯೂಜಿಲೆಂಡಿನ 'ಸ್ಲೋಪ್ ಪಾಯಿಂಟ್'ನಲ್ಲಿರುವ, ಹಿಮ್ಮುಖವಾಗಿ ಬಾಗಿದ ವೃಕ್ಷಗಳು!

ಸಮಭಾಜಕ ವೃತ್ತದಿಂದ ಹಾಗೂ ದಕ್ಷಿಣ ಧ್ರುವದಿಂದ ಸರಿಸುಮಾರು ಸಮಾನ ಅಂತರದಲ್ಲಿರುವ, ಅಂದರೆ ಸಮಭಾಜಕ ವೃತ್ತದಿಂದ 5140 ಹಾಗೂ ದಕ್ಷಿಣ ಧ್ರುವದಿಂದ 4803 ಕಿ.ಮೀ. ದೂರದಲ್ಲಿರುವ 'ಸ್ಲೋಪ್ ಪಾಯಿಂಟ್', ನ್ಯೂಜಿಲೆಂಡ್ ದೇಶದ 'ದಕ್ಷಿಣ ದ್ವೀಪ'ದ (South Island) ದಕ್ಷಿಣದ ತುತ್ತತುದಿ. ಅಂಟಾರ್ಟಿಕಾ ಖಂಡ ಹಾಗೂ ಈ 'ಸ್ಲೋಪ್ ಪಾಯಿಂಟ್' ನಡುವೆ ದೊಡ್ಡದಾದ ಯಾವ ಭೂಪ್ರದೇಶವೂ ಇಲ್ಲದಿರುವುದರಿಂದ ಅಂಟಾರ್ಟಿಕಾದಿಂದ ಬರುವ ತಣ್ಣಗಿನ ಬಿರುಗಾಳಿ ಪ್ರತಿನಿತ್ಯ ಗಂಟೆಗೆ 30ರಿಂದ 60 ಕಿ.ಮೀ.ಗಿಂತಲೂ ಅಧಿಕ ವೇಗದಲ್ಲಿ ವರ್ಷದ ಎಲ್ಲಾ ಕಾಲದಲ್ಲೂ ಹಗಲು–ರಾತ್ರಿ ಈ ಸ್ಲೋಪ್ ಪಾಯಿಂಟನ್ನು ಅಪ್ಪಳಿಸುತ್ತಿದೆ!

ಚಂಡಮಾರುತ ಬೀಸುವ ವೇಳೆಯಲ್ಲಿ ಇದು ಗಂಟೆಗೆ 100 ಕಿ.ಮೀ.ಗೂ ಅಧಿಕವಾಗಿರುತ್ತದೆ!



ಬಿರುಗಾಳಿಯಿಂದಾಗಿ ಹಿಮ್ಮುಖವಾಗಿ ಬಾಗಿ ನಿಂತಿರುವ ಈ ಮರಗಳು, ಕಷ್ಟಗಳಿಗೆ ಜಗ್ಗದೆ ನಿಲ್ಲುವ ಜೀವನೋತ್ಸಾಹಕ್ಕೂ ರೂಪಕವಾಗಿವೆ.

■ ಎಚ್.ಎಸ್. ನಂದಕುಮಾರ್

ಹಾಗಾಗಿ ಇದು ಜನರಿಗೆ ವಾಸಿಸಲು ಯೋಗ್ಯ ಸ್ಥಳವಲ್ಲ. ಅಷ್ಟೇ ಅಲ್ಲ, ಇಲ್ಲಿ ಪ್ರಾಕೃತಿಕವಾಗಿ ತಮ್ಮಷ್ಟಕ್ಕೆ ಬೆಳೆದಿರುವ ಮರ ಗಿಡಗಳೂ ಇಲ್ಲ. ಈ ಸ್ಲೋಪ್ ಪಾಯಿಂಟ್ ಹತ್ತಿರದಲ್ಲೇ ವಾಸಿಸುವ ಹಾಗೂ ಇಲ್ಲಿನ ಹುಲ್ಲುಗಾವಲಿನಲ್ಲಿ ತಮ್ಮ ಕುರಿಗಳಿಗೆ ಹುಲ್ಲು ಮೇಯಿಸುವ ಕುರಿಗಾಹಿಗಳು ಕುರಿಗಳಿಗೆ ನೆರಳು ನೀಡಲು ಒಂದಷ್ಟು ಗಿಡ ನೆಟ್ಟರು. ಆದರೆ ಎಡೆಬಿಡದೆ ರಭಸದಿಂದ ಬೀಸುವ ರಕ್ಕಸ ಬಿರುಗಾಳಿಯ ಮೊನಚಿನಿಂದಾಗಿ ಈ ಗಿಡಗಳು ಹಿಮ್ಮುಖವಾಗಿ ಬಾಗಿ ಬೆಳೆದಿವೆ! ನೋಡಲು ದೇವಲೋಕದಿಂದ ಭೂಮಿಗೆ ಧುಮುಕುವ ಗಂಗೆಯನ್ನು ತಡೆಯಲು ಹಿಂದಕ್ಕೆ ಕೂದಲು ಬಿಟ್ಟುಕೊಂಡು ನಿಂತ 'ಜಟಾಧಾರಿ ಶಿವ'ನಂತೆ ಕಾಣುವ ಈ ವೃಕ್ಷಗಳು ನೋಡುಗರನ್ನು ವಿಸ್ಮಯಗೊಳಿಸುತ್ತಿವೆ!

ಇಂತಹ ಪ್ರಕೃತಿ ವೈಚಿತ್ರ್ಯದ ವೃಕ್ಷಗಳು ಅವಾಸ್ತವಿಕ (surreal) ನೋಟ ಮೂಡಿಸಿ ಬೆರಗುಗೊಳಿಸುತ್ತವೆ! ಎಂತಹ ವಿಷಮ ಪರಿಸ್ಥಿತಿಯನ್ನೂ ಧೈರ್ಯವಾಗಿ ಎದುರಿಸಬಲ್ಲ ಜೀವನೋತ್ಸಾಹಕ್ಕೆ ರೂಪಕವಾಗಿಯೂ ಇವು ಕಾಣುತ್ತವೆ.

ಪ್ರತಿಕ್ರಿಯಿಸಿ: feedback@sudha.co.in

